ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಮೆ: ಬೆಳಗಾಂ ಶುಗರ್ಸ್ ಪ್ರೈವೆಟ್ ಲಿಮಿಟೆಡ್, ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕು, ಹುದಲಿ ಗ್ರಾಮದ ಸರ್ವೆ ನಂ. 59/1, 59/2+3, 59/4, 59/5, 59/6, 60/1, 60/2, 60/3, 60/4, 60/5, 65/1, 65/3, 65/6, 65/8, 66/9, 67/3, 68/3, 68/6+5ಬಿ, 68/5ಬಿ, 68/10, 68/7, 68/4ಎ, 68/4ಬಿ, 68/4ಸಿ, 68/4ಡಿ, 68/9, 68/11, 69/1, 69/2, 69/3, 69/4, 69/5, ಮತ್ತು 69/7 ರಲ್ಲಿ ಹಾಲಿ ಇರುವ ಘಟಕದ ಕಬ್ಬು ಅರೆಯುವ ಸಾಮರ್ಥ್ಯವನ್ನು 7500 ಟಿಸಿಡಿ ಯಿಂದ 15000 ಟಿಸಿಡಿಗೆ ಹೆಚ್ಚಿಸುವುದು ಮತ್ತು ಸಹ-ವಿದ್ಯುತ್ ಉತ್ಪಾದನಾ ಘಟಕದ ಸಾಮರ್ಥ್ಯವನ್ನು 36 ಮೆಗಾವ್ಯಾಟ್ ನಿಂದ 80 ಮೆಗಾವ್ಯಾಟ್ ಗೆ ಹೆಚ್ಚಿಸಲು ಉದ್ದೇಶಿಸಿರುತ್ತಾರೆ ಈ ಯೋಜನೆಯ ಹಿನ್ನೆಲೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.

**ದಿನಾಂಕ** : 19-07-2023.

**ವೇಳೆ** : ಬೆಳಿಗ್ಗೆ 11:0 ಘಂಟೆ,

**ಸ್ಥಳ** : ಮೆ: ಬೆಳಗಾಂ ಶುಗರ್ಸ್ ಪ್ರೈವೆಟ್ ಲಿಮಿಟೆಡ್, ಹುದಲಿ ಗ್ರಾಮ, ಬೆಳಗಾವಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಕಾರ್ಖಾನೆಯ ಆವರಣ

| | | |
|---|---|---|
| ಹಾಜರಿದ್ದ ಅಧಿಕಾರಿಗಳ ವಿವರ | : | ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಯೋಜನಾ ಸಲಹೆಗಾರರ ವಿವರ | : | ಅನುಬಂಧ-2 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಭಾಗವಹಿಸಿದಂತಹ ಸಾರ್ವಜನಿಕರ ವಿವರ | : | ಅನುಬಂಧ-3 |
| ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಬಗ್ಗೆ ನೀಡಿದ ಪತ್ರಿಕಾ ಪ್ರಕಟಣೆಯ ವಿವರಗಳು | : | ಅನುಬಂಧ-4 |
| ಸಾರ್ವಜನಿಕರು ಲಿಖಿತರೂಪದಲ್ಲಿ ಸಲ್ಲಿಸಿದ ಅನಿಸಿಕೆಗಳು | : | ಅನುಬಂಧ-5 |
| ಶಕ್ತಿ ಬಿಂದು ಪ್ರದರ್ಶನದ ವಿವರಗಳು | : | ಅನುಬಂಧ-6 |

ಕೇಂದ್ರ ಅರಣ್ಯ, ಪರಿಸರ ಹಾಗೂ ಆಘಾತ ಅಧ್ಯಯನ ಅಧಿಸೂಚನೆ, ದಿನಾಂಕ 14-09-2006 ಮತ್ತು ತದನಂತರದ ತಿದ್ದುಪಡಿ ಹೊರಡಿಸಿರುವ ಅಧಿಸೂಚನೆ ಪ್ರಕಾರ ಸದರಿ ಯೋಜನೆಯು ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪರಿಸರ ಕುರಿತು ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸಭೆಯನ್ನು ಆಯೋಜಿಸುವ ಜವಾಬ್ದಾರಿಯು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯದ್ದಾಗಿರುತ್ತದೆ. ಅದರಂತೆ ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಗೆ Terms of Reference (ಟಿಒಆರ್) ಅನ್ನು ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ

ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸಲು ಕೋರುವಂತೆ ಮೆ: ಬೆಳಗಾಂ ಶುಗರ್ಸ್ ಪ್ರೈವೇಟ್ ಲಿಮಿಟೆಡ್ ಹುದಲಿ ಗ್ರಾಮ, ಬೆಳಗಾವಿ ಜಿಲ್ಲೆ ಮತ್ತು ತಾಲ್ಲೂಕು, ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅದಿಭೋಗದಾರರು ಪತ್ರದ ದಿನಾಂಕ: 20–04–2023 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ, ಕರಡು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಯೋಜನೆದಾರರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ರಾಜ್ಯ ಮಟ್ಟದ ಪತ್ರಿಕೆಗಳಾದ **"ಪ್ರಜಾ ವಾಣಿ"** (ಕನ್ನಡ) ಮತ್ತು **"ದಿ ಹಿಂದು"** (ಆಂಗ್ಲ ಭಾಷೆ)ಯಲ್ಲಿ ದಿನಾಂಕ: 18–06–2023 ರಂದು ಹಾಗೂ ಸ್ಥಳೀಯ ಮಟ್ಟದ **"ವಿಜಯವಾಣಿ"** ದಿನ ಪತ್ರಿಕೆಯಲ್ಲಿ ದಿನಾಂಕ: 21–06–2023 ರಂದು ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲೂ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ಮೌಖಿಕ, ಲಿಖಿತ/ಇ–ಮೇಲ್ ಮೂಲಕ ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 19–07–2023 ರಂದು ಬೆಳಿಗ್ಗೆ 11:00 ಘಂಟೆಗೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀಮತಿ ಶೋಭಾ ಲ ಪೊಳ. ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ–1 ಇವರು ಶ್ರೀ ನಿತೇಶ್ ಕೆ ಪಾಟೀಲ್, ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ ಮತ್ತು ಶ್ರೀ ಗೋಪಾಲಕೃಷ್ಣ ಬಿ ಸಣತಂಗಿ, ವಲಯ ಹಿರಿಯ ಪರಿಸರ ಅಧಿಕಾರಿಗಳು, ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಳಗಾವಿ, ಹಾಗೂ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಲಹೆಗಾರರನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ಮಾಧ್ಯಮ

ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಇವರಿಗೆ ಸ್ವಾಗತವನ್ನು ಕೋರಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಏಳು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರು ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನಾ ಸಲಹೆಗಾರರಿಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿರವರು ಸೂಚಿಸಿದರು.

ಸದರಿ ಯೋಜನೆಯ ಸಲಹೆಗಾರರಾದ ಮೆ: ಎನ್ವಿರೊನಮೆಂಟಲ್ ಹೆಲ್ತ & ಸೇಫ್ಟಿ ಕನ್ಸಲ್ಟಂಟ್ಸ್, ಪ್ರೈ.ಲಿ, ಬೆಂಗಳೂರು ರವರು ಯೋಜನೆಯ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದಲ್ಲಿ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

**ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ:** ಸಾರ್ವಜನಿಕರು ತಮ್ಮದೇನಾದ್ರು ಅನೂಕೂಲ ಆಗುತ್ತೆ, ಒಳ್ಳೆಯದಾಗುತ್ತೆ ಅಂತಾ ಇದ್ರೆ ಆ ಅನಿಸಿಕೆನು ಹೇಳಬಹುದು, ಬೇರೆ ಏನಾದ್ರು ಇದ್ರು ಆ ಅನಿಸಿಕೆಗಳನ್ನು ಹೇಳಬಹುದು, ಮೊದಲು ತಮ್ಮ ಹೆಸರು ಮತ್ತು ಊರು ಹೆಸರು ಹೇಳಿ ವಿಷಯವನ್ನು ಹೇಳಬೇಕು ಎಂದು ತಿಳಿಸಿದರು.

**ಸಾರ್ವಜನಿಕರು ವ್ಯಕ್ತ ಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.**

1. **ಶ್ರೀ. ಶಂಕರ ಬೀರನ್ನವರ, ಮಿಡಕನಟ್ಟಿ ಗ್ರಾಮ, ಗೋಕಾಕ ತಾಲೂಕು:** ಈ ಕಾರ್ಖಾನೆ ಇಂದ 10 ಕೀ.ಮಿ ಇದೆ. ನಮ್ಮಲ್ಲಿ ಎರಡು ಡ್ಯಾಮ ನೀರಾವರಿ ಪ್ರದೇಶ ಇದ್ದಾವೆ ಕಬ್ಬನ್ನು ಜಾಸ್ತಿ ಪ್ರಮಾಣದಲ್ಲಿ ಬೆಳಿತಿವಿ ಸರ್ ನಾವು ಮೊದಲು ಇದು 7500 ಟಿಸಿಡಿ ಇತ್ತು ಆಗ ಎರಡು ಮೂರು ದಿನಗಳಿಗೆ ವಾಹನ ಖಾಲಿಯಾಗುತ್ತಿದ್ದವು ಈಗ ಇದು ಕಾರ್ಖಾನೆ ದೊಡ್ಡದು ಆಗೊಂದ್ರಿಂದ ರೈತರಿಗೆ ಅನೂಕೂಲವಾಗುತ್ತದೆ ಎಂದು ತಿಳಿಸಿದರು.
2. **ಶ್ರೀ. ಮಂಜುನಾಥ ಮೊರಕರ, ತುಮ್ಮರಗುದ್ದಿ ಗ್ರಾಮ:** ಈ ಸಕ್ಕರೆ ಕಾರ್ಖಾನೆ ಮೊದಲು ಪ್ರಾರಂಭವಾದಾಗ ಕಬ್ಬಿನದು ಸ್ವಲ್ಪ ಸಮಸ್ಯ ಯಾಗುತ್ತಿತ್ತು, ಇವಾಗ ಏನು ತೊಂದರೆ ಇಲ್ಲಾ ಪ್ರತಿ ದಿವಸ ವಾಹನಗಳು ಖಾಲಿಯಾಗುತ್ತಿದ್ದಾವೆ. ಕೋವಿಡ್ ಆದಾಗಿನಿಂದ ಆವಾಗ ನಮಗೆ ಯಾರಿಗೂ ಕೆಲಸ ಇರಲಿಲ್ಲ, ನಮ್ಮ ಅಣ್ಣ ತಮ್ಮಂದಿರು ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದರು ಈ ಕಾರ್ಖಾನೆಯಾದ ಮೇಲೆ ಅವರು ಇಲ್ಲಿ ಬಂದು ಸೇರಿಕೊಂಡರೆ ಒಳ್ಳೆಯದಾಗುತ್ತೆ ಎಂದು ತಿಳಿಸಿದರು.
3. **ಶ್ರೀ ಲಕ್ಕಪ್ಪ ರಾಮಪ್ಪಾ ತಳವಾರ, ಯದ್ದಲಗುಡ್ಡ ಗ್ರಾಮ:** ಮೊದಲು ನಾವು ಕಡಿಮೆ ಪ್ರಮಾಣದಲ್ಲಿ ಕಬ್ಬನ್ನು ಬೆಳೆಯುತ್ತಿದ್ದೇವು ಏಕೆಂದರೆ ನಮ್ಮ ಸುತ್ತಮುತ್ತಲು ಕಾರ್ಖಾನೆ ಇಲ್ಲದಿರುವುದರಿಂದ, ಆದ ಕಾರಣ ನಾವು

ಕಡಿಮೆ ಪ್ರಮಾಣದಲ್ಲಿ ಬೆಳೆಯುತ್ತಿದ್ದೇವು. ಈವಾಗ ಈ ಕಾರ್ಖಾನೆ ಯಾದಗಿನಿಂದ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯಲು ಅನೂಕೂಲವಾಗಿರುತ್ತದೆ. ನಮಗೆ ಯಾವುದೇ ತೊಂದರೆ ಇರುವುದಿಲ್ಲ, ಪರಿಸರದ ಸಂಬಂಧವಾಗಲಿ ಮತ್ತೆ ಯಾವುದೇ ತೊಂದರೆ ಇಲ್ಲಾ ಈ ಕಾರ್ಖಾನೆ ಯಾದಗಿನಿಂದ ಹೆಚ್ಚಿನ ಪ್ರಮಾಣದಲ್ಲಿ ಕಬ್ಬು ಬೆಳೆಯಲು ಅನೂಕೂಲವಾಗಿರುತ್ತದೆ ಎಲ್ಲಾ ರೀತಿಯಿಂದ ಚೆನ್ನಾಗಿ ಆಗಿದೆ ಎಂದು ಹೆಳಲು ಬಯಸುತ್ತೇವೆ.

4. **ಶ್ರೀ. ಶೇಖರ ಹೊಸೂರ, ಧರನಟ್ಟಿ ಗ್ರಾಮ:** ಈ ಕಾರ್ಖಾನೆ ದೊಡ್ಡ ಪ್ರಮಾಣದಲ್ಲಿ ಮಾಡುವುದರಿಂದ ತೊಂದರೆ ಇರುವುದಿಲ್ಲ ಯುವಕರಿಗೆ ಕೆಲಸ ಸಿಗುತ್ತದೆ ಇದು ನನ್ನ ಅನಿಕೆ ಎಂದು ತಿಳಿಸಿದರು.
5. **ಶ್ರೀಮತಿ. ಮಂಜುಳಾ, ಚಿತ್ರದುರ್ಗ:** ನಾನು ಕೇಂದ್ರ ವಿದ್ಯಾ ಸಂಸ್ಥೆಯ ಪರಿಸರವಾದಿ. ಮೆ: ಬೆಳಗಾಂ ಶುಗರ್ಸ್, ಬೆಳಗಾವಿ ಈ ಕಾರ್ಖಾನೆಗೆ ಬಂದವರಿಗೆ ತಮಗೆಲ್ಲ ನನ್ನ ನಮಸ್ಕಾರಗಳನ್ನು ತಿಳಸುತ್ತಿದ್ದೇನೆ. ಯಾವುದೇ ಒಂದು ಉದ್ಯಮ ಬಂತು ಅಂದ್ರೆ ಅದಕ್ಕೆ ಪರ ವಿರೊಧ ಎರಡು ಇರುತ್ತೆ. ಇಲ್ಲಿಯ ಒಂದು ಶುಗರ್ಸ್ ಕಂಪನಿಯಿಂದ ಎಲ್ಲರಿಗೂ ಅನೂಕೂಲ ವಾಗಿರುವುದರಿಂದ ನಿಮಗೆ ಉದ್ಯೋಗ ಅವಕಾಶಗಳು ಸಿಗುತ್ತೆ ಅಂತಾ ತಿಳಿದು ಎಲ್ಲರೂ ಸಪೋರ್ಟ ಮಾಡತಾಯಿದ್ದಿರಾ ಈಗಿನ ಒಂದು ಜನರೇಶನ್ ಎಷ್ಟೇ ವಿಜ್ಞಾನ ಮುಂದೆ ವರೆದಿದ್ದರು ಸಹ ಓದಿರುವಂತಾ ವಿದ್ಯಾವಂತರಿಗೆ ಒಂದು ಕೆಲಸ ಸಿಗುತ್ತಿಲ್ಲಾ. ನಿರುದ್ಯೋಗ ಅನ್ನೊದೇ ಒಂದು ಮಾಲಿನ್ಯ ವಾಗಿಬಿಟ್ಟಿದೆ ನಮ್ಮ ದೇಶದಲ್ಲಿ ಹಾಗಾಗಿ ಇಂತಾ ಒಂದು ಕಂಪನಿಗಳಿಗೆ ನಾವು ಬೆಂಬಲ ನೀಡುವುದರಿಂದ ಖಂಡಿತ ಸುತ್ತ ಮುತ್ತಲಿನ ಹಳ್ಳಿಯವರಿಗೆ ಉದ್ಯೋಗ ಅವಕಾಶಾನು ಸಿಗುತ್ತೆ ಒಂದು ಉತ್ತಮ ಬೆಳವಣಿಗೆ ಕಾಣುತ್ತೆ ಅನ್ನೊದು ನಮ್ಮ ಉದ್ದೇಶ ಆಗಿರುತ್ತೆ ಹಾಗಾಗಿ ನಾವು ಸಹ ನಮ್ಮ ಬೆಂಬಲ ನಿಡುತ್ತಿದ್ದೇವೆ. ಇನ್ನು ಹೆಚ್ಚಿನ ಸಲಹೆ ಸೂಚನೆಗಳಿಗೆ ತಮ್ಮಲ್ಲಿ ಬರಹದಲ್ಲಿ ಪತ್ರವನ್ನು ನಿಡುತ್ತೇನೆ ಎಂದು ಹೇಳಿದರು.
6. **ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ:** ಎಲ್ಲರಿಗೂ ಕೂಡಾ ಧನ್ಯವಾದಗಳು, ಎಲ್ಲರೂ ಕೂಡಾ ಇದು ಸಾಮರ್ಥ್ಯ ಜಾಸ್ತಿ ಯಾದ್ರೆ ಉದ್ಯೋಗಗಳು ಜಾಸ್ತಿ ಆಗುತ್ತೆ ಎಲ್ಲ ಯುವಕರಿಗೂ ಅನೂಕೂಲವಾಗುತ್ತೆ ಮತ್ತು ಕಬ್ಬು ಕಳುಹಿಸುವ ರೈತರಿಗೆ ಅನೂಕೂಲವಾಗುತ್ತೆ ಅಂತಾ ಎಲ್ಲಾ ಪಾಸಿಟಿವ(ಧನಾತ್ಮಕ) ಅಭಿಪ್ರಾಯಗಳನ್ನ ಕೊಟ್ಟಿದ್ದಿರಿ. ಇವತ್ತಿನ ದಿನ ಈ ಸಾರ್ವಜನಿಕ ಆಲಿಕೆ ಸಭೆಗೆ ತಾವೆಲ್ಲರೂ ಬಂದು ಎಲ್ಲ ತಮ್ಮ ಅನಿಸಿಕೆಗಳನ್ನು ಕೊಟ್ಟಿದ್ದಿರಿ ತಮ್ಮೆಲ್ಲರಿಗೂ ಧನ್ಯವಾದಗಳು.

ವಂದನಾರ್ಪಣೆಯೊಂದಿಗೆ ಈ ಸಭೆಯು ಮುಕ್ತಾಯಗೊಂಡಿತು.

Patiwa 1/8/23

**(ಶ್ರೀ. ನಿತೇಶ್ ಕೆ. ಪಾಟೀಲ್, ಭಾ.ಆ.ಸೇ.)**
**ಜಿಲ್ಲಾಧಿಕಾರಿಗಳು**
**ಮತ್ತು ಜಿಲ್ಲಾ ದಂಡಾಧಿಕಾರಿಗಳು**
**ಮತ್ತು ಪರಿಸರ ಸಾರ್ವಜನಿಕಆಲಿಕೆ ಸಭೆ ಅಧ್ಯಕ್ಷರು,**
**ಬೆಳಗಾವಿ, ಕರ್ನಾಟಕ**

1/8/23